ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ತಾಲ್ಲೂಕ್ ಆದರೂ ಆಗಬಹುದು, ನಿಮ್ಮ ತಾಲ್ಲೂಕ್ ಆದರೂ ಆಗಬಹುದು, ಈ ದೃಷ್ಟಿಯಿಂದ ತಾಲ್ಲೂಕ್‌ಗಳನ್ನು ಒಂದು ಘಟಕವನ್ನಾಗಿ ಇಟ್ಟುಕೊಂಡು ಆದರ ಒಂದು ಆಧಾರದ ಮೇಲೆ ಕೈಗಾರಿಕೆಯ ಹಿಂದುಳಿದ ಪ್ರದೇಶವೆಂದು ಪರಿಗಣಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

SRI D. DEVARAJ URS.—They have laid down certain norms according to which we make recommendations. They have taken the district as a unit

ಶ್ರೀ ಹಂಜಿಶಿವಣ್ಣ. ಇಲ್ಲಿ ೧೦ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಆ ಜಿಲ್ಲೆಗಳು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಬೆಳಗಾಂ, ಬಿಜಾಪುರ, ಬೀದರ್, ಧಾರವಾಡ, ಗುಲ್ಬರ್ಗ ಹಾಸನ, ಸೌತ್ ಕೆನರಾ, ನಾರ್ತ್ ಕೆನರಾ ಮೈಸೂರು, ತುಮಕೂರು ಮಂತ್ತು ರಾಯಚೂರು.

ಶ್ರೀ ಎಚ್. ಟಿ. ಕೃಷ್ಣಪ್ಪ. ಈ ಕೆರೆಯ ಕೆಲಸ ೧೯೫೬-೫೭ರಲ್ಲಿ ಮಂಜೂರಾಗಿ ಕೆಲಸ ಪ್ರಾರಂಭವಾಗಿದ್ದರೂ ಸಹ ಇದುವರೆಗೆ ಕೆಲಸ ಮುಗಿದಿಲ್ಲ ; ಇದು ತಮ್ಮ ಉತ್ಪ್ರೇರಿದಿಂದಲೇ ವೇದ್ಯವಾಗುತ್ತದೆ. ಇಷ್ಟು ವಿಳಂಬವಾಗುವುದಕ್ಕೆ ಏನು ಕಾರಣ ಎಂಬುದನ್ನು ವಿವರಿಸುತ್ತೀರಾ ?

† ಶ್ರೀ ಎಸ್. ಬಿ. ನಾಗರಾಳ್.—ಕೆರೆ ಕಟ್ಟುವ ಜಾಗದಲ್ಲಿ ಕೂಲಿಗಾರರು ಸಿಗದೆ ಇಂಟೀರಿಯರ್‌ಗೆ ಹೋಗಿ ಕರೆದುಕೊಂಡುಬರಬೇಕಾಗಿದ್ದರಿಂದ ಈ ಕೆಲಸ ನಿಧಾನವಾಗಿದೆ. ಮತ್ತು ಇಂದು ನಾನು ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರಿಗೆ ಈ ಬಗ್ಗೆ ಫೋನ್ ಮಾಡಿ ವಿಚಾರಿಸಿದಾಗ ಮಾರ್ಚ್ ೧೯೭೫ ರೊಳಗೆ ಈ ಕೆಲಸ ಮುಗಿಯುತ್ತದೆ, ನಂತರ ನೀರು ಬಿಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಲ್ಲಿ ಕೂಲಿಗಾರರು ಸಿಗಲಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು. ನಾನು ಆ ಭಾಗದಲ್ಲಿ ಎಷ್ಟು ಕೂಲಿಗಳನ್ನು ಬೇಕಾದರು ಒದಗಿಸುವುದಕ್ಕೆ ಸಿದ್ಧವಿದ್ದೇನೆ. ಇದು ಇಷ್ಟು ವಿಳಂಬವಾಗಿರುವುದಕ್ಕೆ ಕಾರಣ ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳು ಅದರೆ ಅದನ್ನು ಮುಚ್ಚಿಡುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದೀರಿ. ಈ ರೀತಿ ನಿಧಾನವಾಗಿದ್ದಕ್ಕೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಖರ್ಚು ಬಂದಿದೆ. ಮೊದಲಂ ಇದು ೨೪,೫೦ ರೂಪಾಯಿಗಳಿಗೆ ಮಂಜೂರಾಗಿದ್ದರೆ, ಇಂದು ಅದೇ ಕೆಲಸಕ್ಕೆ ೭೮,೧೦೦ ರೂಪಾಯಿಗಳಾಗಿವೆ. ಆದಕಾರಣ ಇದಕ್ಕೆ ಕಾರಣರಾದವರನ್ನು ಕಂಡುಹಿಡಿದು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಬಿ ನಾಗರಾಳ್.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಇಲ್ಲಿ ಸಂಬಂಧಪಟ್ಟ ಕಂಟ್ರಾಕ್ಟರ್ ಅಂದರೆ ಲೋಕಲ್ ಕಂಟ್ರಾಕ್ಟರ್ ಕಾಲಕ್ಕೆ ಸರಿಯಾಗಿ ಕೆಲಸ ಮಾಡಲಿಲ್ಲ ಮತ್ತು ಬೇರೆಯವರಿಗೆ ಟೆಂಡರ್ ಹಾಕುವುದಕ್ಕೆ ಬಿಟ್ಟಿಲ್ಲ ಆದಕಾರಣ ತಡವಾಗಿದೆ. ಮಾರ್ಚ್ ೧೯೭೫ ರೊಳಗೆ ಈ ಕೆಲಸ ಮುಗಿದು ನೀರು ಬಿಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ —ಒಂದುವೇಳೆ ಕಂಟ್ರಾಕ್ಟರ್ ತಪ್ಪು ಮಾಡಿದ್ದರೆ ಇಲಾಖೆಯಿಂದಲೇ ಈ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಮಾರ್ಚ್ ೧೯೭೫ ರೊಳಗೆ ಈ ಕೆಲಸ ಮುಗಿಯುತ್ತದೆಂದು ನಾನು ಈಗಾಗಲೇ ಹೇಳಿದ್ದೇನೆ.

* *Bus Stand at Tumkur*

502. SRI R. CHIKKAIAH (Madhugiri).—Will the Minister for Transport and Tourism be pleased to state :—

(*a*) whether it has come to the notice of the Government that a number of buses pass through Tumkur Town ;

(*b*) whether it has come to the notice of Government that there is no protection from wind sun and rain at Tumkur Bus Stand :

(c) whether the Government is aware of the necessity of a bus stand at Tumkur for the travelling public :

(d) if so, when the Government intend to take up ?

SRI MOHAMED ALI (Minister for Transport and Tourism) —

(a) Yes.

(b) The present bus stund is found to be inadequte and found wanting in basic amenities satisfactorily.

(c) Yes

(d) This will be taken by K. S. R. T. C. as and when funds are available.

ಶ್ರೀ ಆರ್. ಚಿಕ್ಕಯ್ಯ.- ತಮ್ಮ ಉತ್ತರದಲ್ಲಿ ಈ ಬಸ್ಸು ನಿಲ್ದಾಣದಲ್ಲಿ ಸಾಕಷ್ಟು ಸೌಲಭ್ಯಗಳು ಸಾರ್ವಜನಿಕರಿಗೆ ಇಲ್ಲ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಮುತ್ತು ಇದರ ಅಗತ್ಯವಿದೆ ಎಂಬುದನ್ನು ಸಹ ಒಪ್ಪಿಕೊಂಡಿದ್ದೀರಿ. ಆದಕಾರಣ ಇದನ್ನು ನಿರ್ಮಾಣ ಮಾಡಲು ಬೇಕಾಗುವ ಜಮೀನನ್ನು ಪಡೆಯುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

† SRI MOHAMED ALI.—There is one bus station which belongs to the Municipality. Twice attempts were made by the Corporation to take over the bus station and construct a bigger bus station ; but the Municipality did not agree. If the Municipality agrees, then it will be very easy for the Corporation to take construction or the Corporation has to acquire a piece of land.

ಶ್ರೀ ಆರ್. ಚಿಕ್ಕಯ್ಯ.—ಹಣ ಒದಗಿದಾಗ ಇದರ ಕೆಲಸ ಮಾಡುತ್ತೇವೆಂದು ಹೇಳಿದ್ದೀರಿ ಆದರೆ ಈ ಪ್ರಶ್ನೆ ಈ ಸದನದಲ್ಲಿ ಬರುತ್ತಿರುವುದು ಇದು ಮೂರನೇ ಸಲ ಆದಕಾರಣ ಇದಕ್ಕೆ ಹಣ ಯಾವಾಗ ಒದಗುತ್ತದೆ, ಯಾವಾಗ ಕನ್ಸ್ಟ್ರಕ್ಷನ್ ಮಾಡುತ್ತೀರಾ ಎಂಬುದನ್ನು ಹೇಳುತ್ತೀರಾ ?

SRI MOHAMED ALI.—As the House is aware that in the successive three plans, no fund has been provided for the K S. R. T. C. and in view of hundred percent increase in the cost of operation, it is a little difficult for the Corporation to find funds for bus stations. However in view of the need for a bus station, the matter is under consideration.

* *Recovery of Dead Bodies by Belgaum Police*

104. SRI B. B. SAYANAK (Belghum).—Will the Chief Minister be pleased to state.

(a) whether 8 dead bodies were recovered by Belgaum Police from 1st to 18th October 1974 ;

(b) if so, the number out of them that were traced by the Police ;

(c) whether all of them are connected with murder cases or suicide cases ?